ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ಇಲ್ಲವೆ ಎರಡು ತಿಂಗಳು ಹಿಂದೆ.

ಶ್ರೀ ಮಿರಾಜುದ್ದೀನ್ ಎನ್. ಪಾಟೇಲ್: ಅದಕ್ಕೇ ನಾನು ಹೇಳಿದ್ದು. ಇದನ್ನು ಉಚಿತವಾಗಿ ಕೊಡುವುದನ್ನು ಜಾರಿಗೆ ತಂದದ್ದು 1.1.2005. ಅದಕ್ಕೂ ಮೊದಲು ಚಾರ್ಜ್ ತೆಗೆದುಕೊಂಡೇ ಕೊಡುತ್ತಿದ್ದರು. ಅದಕ್ಕೇ ತಮ್ಮನ್ನು ಕ್ಲಾರಿಫಿಕೇಷನ್ ಮಾಡುವುದಕ್ಕೆ ಕೇಳಿದ್ದು. ನಾವು 1.1.2005 ರಿಂದ ಎಲ್ಲಾ ಲಸಿಕೆಗಳನ್ನು ಸಂಪೂರ್ಣವಾಗಿ ಉಚಿತವಾಗಿ ಕೊಡಬೇಕೆಂದು ಮಾಡಿದ್ದೇವೆ. ಮತ್ತು ಬೇರೆ ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲವೆಂದು ಇಲ್ಲ. ಈಗಲೂ 2.81 ಲಕ್ಷ ರೂ.ಗಳ ಔಷಧಿಗಳು ಸ್ಟಾಕ್‌ನಲ್ಲಿದೆ. ಔಷಧಿಯ ಕೊರತೆ ಇಲ್ಲ. ಕೆಲವು ಕಡೆ in time suplly ಆಗದಿರುವುದರಿಂದ ಅವರು ಸ್ಟಾಕ್ ಇಲ್ಲವೆಂದು ಹೇಳಿರಬೇಕು. ನಾವು ಈಗ ಎಲ್ಲಾ ಕಡೆಯಿಂದ ಮಾಹಿತಿ ತರಿಸುತ್ತಿದ್ದೇವೆ. ಏಕೆಂದರೆ ಕೆಲವು ಕಡೆ ಔಷಧಿ ಇಲ್ಲ, ಚಾರ್ಜ್ ಕೇಳುತ್ತಿದ್ದಾರೆಂದು ಬಂದಿತ್ತು. ಆದ್ದರಿಂದ ಇಡೀ ರಾಜ್ಯದಲ್ಲಿ present position ಪ್ರತಿಯೊಂದು ಆಸ್ಪತ್ರೆಯಲ್ಲಿ ಔಷಧಿಯ ಸ್ಟಾಕ್ ಇದೆ. ಕೊರತೆ ಇಲ್ಲ, ಎಲ್ಲಾದರೆ ಕೊರತೆ ಇರುವ ಬಗ್ಗೆ ನಮಗೆ ನೋಟೀಸ್ ಬಂದರೆ ಅದಕ್ಕೆ ವ್ಯವಸ್ಥೆ ಮಾಡುತ್ತೇವೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಿರಾಜುದ್ದೀನ್ ಎನ್. ಪಾಟೇಲ್ (ಪಶುಸಂಗೋಪನೆ ಹಾಗೂ ವಕ್ಫ್ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 2.2.2005ರ 7ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗಳ ಪೈಕಿ 201 ಪ್ರಶ್ನೆಗಳಿಗೆ ಹಾಗೂ ದಿನಾಂಕ 3.2.2005ರ 8ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 94 ಪ್ರಶ್ನೆಗಳ ಪೈಕಿ 75 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. (ಅನುಬಂಧ-I)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 9 ಗಂಟೆಗೆ ಸೇರುವುದು.

(ಸದನವು ರಾತ್ರಿ 7 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 4ನೇ ಫೆಬ್ರವರಿ ಮಾಹೆ 2005ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಸೇರಲು ನಿಶ್ಚಯಿಸಿತು)